ನಿಲುವಳಿ ಸೂಚನೆಯಲ್ಲಿ ಆ ಮನೆಯ ಅಧ್ಯಕ್ಷರ ಮೇಲೆ ತಂದಿರುವಂತಿದೆ. ಆ ರೀತಿಯ ಅಭಿಪ್ರಾಯ ದಲ್ಲಿ ತಾವು ಈ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಬೋನಫೈಡ್ ಬಲೀಫ್ ಕೊಟ್ಟು ಹಾಗೆ ಕೊಟ್ಟಿದ್ದೀರಿ. ಈ ಒಂದು ನಿಲುವಳಿ ಸೂಚನೆಯನ್ನು ಚರ್ಚೆ ಮಾಡಬೇಕೆಂದು ನಮ್ಮ ಈ ಮನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ. ಇದು ಕೌನ್ಸಿಲ್‌ನ ಛೇರ್ಮನ್‌ರವರ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೆ ಎನ್ನುವ ಅಭಿಪ್ರಾಯಕ್ಕೆ ನಾನು ಬಂದಿದ್ದೇನೆ. ಆದ್ದರಿಂದ ಈ ನಿಲುವಳಿ ಸೂಚನೆಯ ಬಗ್ಗೆ ಚರ್ಚೆ ಮಾಡುವುದು ಸರಿಯಲ್ಲವೆಂದು ಅವರ ಪಾಯಿಂಟ್ ಆಫ್ ಆರ್ಡರ್ ವಿಂಗಡಣೆಯ ನಂತರ ಏನು ಹೇಳಿದ್ದಾರೆ ಅದರಲ್ಲಿ ಸತ್ಯಾಂಶ ಇದೆ. ಈ ಒಂದು ನಿಲುವಳಿ ಸೂಚನೆಯ ಅಡ್ಮಿಸಿಬಿಲಿಟಿ ಬಗ್ಗೆ ಕೆಲವೊಂದು ವಿಚಾರಗಳನ್ನು ನನಗೆ ತಾವು ಹೇಳಿದ್ದೀರಿ, ಏಕೆಂದರೆ ನನಗೂ ಕೆಲವು ವಿಚಾರಗಳನ್ನು ತಿಳಿಯುವ ಅವಕಾಶವಾಯಿತು. ಇದರಿಂದ ನನಗೂ ಅನುಕೂಲವಾದ ಹಾಗೆ ಆಯಿತು. ಆದರೂ ತಮ್ಮ ನಿಲುವಳಿ ಸೂಚನೆಗೆ ನನ್ನ ಅನುಮತಿಯನ್ನು ಕೊಡದೆ, ಅನುಮತಿಯ ನಿರಾಕರಣೆ ಮಾಡಿದ್ದೇನೆ. ಎಲ್ಲರಿಗೂ ಧನ್ಯವಾದಗಳು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ತಮ್ಮ ತೀರ್ಪನ್ನು ಪ್ರಶ್ನೆ ಮಾಡತಕ್ಕಂತಹ ಹಕ್ಕು ನಮಗ್ಯಾರಿಗೂ ಇಲ್ಲ. ನಾವು ಎಲ್ಲಾ ವಿಚಾರಗಳನ್ನು ಕೂಡ ಪ್ರಸ್ತಾಪ ಮಾಡಿಲ್ಲ. ತಮ್ಮ ಬಗ್ಗೆ ನಮಗೆ ಅಪಾರ ಗೌರವ ಇದೆ. ಸಭೆಯನ್ನು ಬಹಳ ಶಾಂತ ರೀತಿಯಿಂದ ನಡೆಸಿಕೊಂಡು ಬಂದಿದ್ದೀರಿ. ನಿಮ್ಮ ಅಭಿಪ್ರಾಯದ ಪ್ರಕಾರ ಈ ಸದನದಲ್ಲಿ ಸರ್ಕಾರದ ವಿರುದ್ಧ ಸೆನ್ಸಾರ್ ಮೋಷನ್ ಅನ್ನು ಮೂವ್ ಮಾಡಬೇಕೆಂದು ವಿರೋಧ ಪಕ್ಷದವರು ಇದ್ದರು, ಈ ವಿಚಾರ ಚರ್ಚೆಗೆ ಬಂದರೆ, ಸರ್ಕಾರ ಇಕ್ಕಟ್ಟಿಗೆ ಸಿಕ್ಕಂತಾಗುತ್ತದೆ, ಬಹುಮತ ಅವರಿಗೆ ಇಲ್ಲ.....

ಶ್ರೀ ಎಂ. ಎಂ. ರಘುಪತಿ.—ಅಧ್ಯಕ್ಷರು ರೂಲಿಂಗ್ ಕೊಟ್ಟ ಮೇಲೂ ವಾಖ್ಯಾನ ಮಾಡುವಂತಹದ್ದು ಎಲ್ಲಿಯೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಸ್ವಲ್ಪ ಹೇಳಬೇಕಾಗುತ್ತದೆ,

(ಗೊಂದಲ)

ಸೆನ್ಸಾರ್ ಮೋಷನ್ ಚರ್ಚೆಗೆ ಬರಬಾರದೆಂಬ ಉದ್ದೇಶದಿಂದ ತಾವು ತಂತ್ರವನ್ನು ಹೂಡಿ ಆ ಸದನ ವಹಿಸಿ ಮುಂದೂಡಿದ್ದೀರಿ. ಇದು ಅಧ್ಯಕ್ಷರ ತಪ್ಪಲ್ಲ.

(ಗೊಂದಲ)

ಇದನ್ನಿ ಪ್ರತಿಭಟಿಸಿ ನಾವು ಸಭಾ ತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್‌ನ ಎಲ್ಲಾ ಮಾನ್ಯ ಸದಸ್ಯರು ಸಭೆಯಿಂದ ಹೊರಗಡೆ ಹೋದರು)

(ಗೊಂದಲ)

ಶ್ರೀ ಎಂ. ರಘುಪತಿ.—ನನ್ನ ಪಾಯಿಂಟ್ ಆಫ್ ಆರ್ಡರನ್ನು ತಾವು ಕೇಳಬೇಕು. ಒಂದು ತಿರ್ಮಾನವನ್ನು ಸಭಾದ್ಯಕ್ಷರು ಕೊಟ್ಟ ಮೇಲೆ ಅದರ ಬಗ್ಗೆ ವ್ಯಾಖ್ಯಾನ ಮಾಡುವುದು ಎಂದೂ ಇಲ್ಲ. ಯಾವ ಚರಿತ್ರೆಯೂ ಇಲ್ಲ. ಅಂತಹ ವಿಷಯದ ಬಗ್ಗೆ ಇವೊತ್ತು ಅವರು ಚರ್ಚೆ ಮಾಡುತ್ತಿದ್ದಾರೆ. ಸರ್ಕಾರ ಇದರಲ್ಲಿ ಯಾವ ಆಸ್ಪಕ್ಷೇಪವನ್ನೂ ಮಾಡಿಲ್ಲ. ಈ ಸರ್ಕಾರಕ್ಕೆ ಯಾವ ಸಂಬಂಧವೂ ಇಲ್ಲ. ಆದ್ದರಿಂದ ಅವರು ಏನು ವ್ಯಾಖ್ಯಾನ ಮಾಡಿದ್ದಾರೆ ಅದು ಅರ್ಥಹೀನವೆಂದು ಹೇಳಬಯಸುತ್ತೇನೆ.

೩-೦೦ ಪಿ. ಎಂ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ ನಿಯಮ ೩೧೫ರ ಪ್ರಕಾರ...

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಕೆ. ಎಚ್. ಪಾಟೀಲ್‌ರವರೆ ತಮ್ಮ ಗಮನ ಸೆಳೆಯುವ ಸೂಚನೆಯನ್ನು ಮಂಡನೆಗೆ ಹಾಕಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.— I want to give a personal explanation under rule 315.

ಅಧ್ಯಕ್ಷರು.— ತಾವು ನೋಟೀಸ್ ಕೊಡಿ.